ಎಮ್.ವಿ.ಸಿ.ನಂ.1745/2023<br>ಪಿಡಬ್ಲೂ 1

**(ಇಂದು ದಿಃ 17.01.2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀ ಎನ್ ಆರ್ ವಕೀಲರಿಂದ ಅರ್ಜಿದಾರರ ಪರ ಃ-

ಈ ದಿನ ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ನೀಡಲು ವಿನಂತಿ.

ಪಾಟೀ ಸವಾಲು ಃ- ಶ್ರೀ ವಿವಿಸಿ ವಕೀಲರಿಂದ 2 ನೇ ಎದುರುದಾರರ ಪರ ಃ-

ಸದರಿ ದಿನ ನನ್ನ ಹೆಂಡತಿಯಾದ ಅನುಸೂಯಾ, ಸುನೀಲ್ ಹಾಗೂ ಸೊಸೆಯಾದ ಪ್ರಮೀಳಾ ಸೇರಿ ಆಟೋರಿಕ್ಷಾ ದಲ್ಲಿ ಹೋಗುತ್ತಿದ್ದರು. ಸದರಿ ದಿನ ಆಟೋರಿಕ್ಷಾ ದಲ್ಲಿ ಸುಮಾರು 10 ಜನ ಪ್ರಯಾಣ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ದಿನ ಸುಮಾರು 3 ಜನರು ಚಾಲಕನ ಪಕ್ಕದಲ್ಲಿ ಕುಳಿತಿದ್ದರು ಎಂದರೆ ಸರಿಯಲ್ಲ. ಹೆಚ್ಚಿನ ಪ್ರಯಾಣಿಕರನ್ನು ತೆಗೆದುಕೊಂಡು ಹೋಗಿದ್ದರಿಂದ ಆಟೋರಿಕ್ಷಾ ಚಾಲಕನ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಅಪಘಾತಕ್ಕೆ ಆಟೋ ಚಾಲಕನು ಸಹ ಸಮನಾದ ಕಾರಣೀಕರ್ತ ಎಂದರೆ ಸರಿಯಲ್ಲ. ಮೃತ ಪ್ರಮೀಳಾರವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಸದರಿ ಮಕ್ಕಳು ನನ್ನ ಬಳಿ ಇರುತ್ತವೆ ಮತ್ತು ಇಂದು ನ್ಯಾಯಾಲಯಕ್ಕೆ ಕರೆತಂದಿರುತ್ತೇನೆ. ಅಪಘಾತದ ಸಮಯದಲ್ಲಿ ಮೃತಳಿಗೆ 35 ವರ್ಷ ವಯಸ್ಸು ಇರಬಹುದು. ನನ್ನ ಸೊಸೆಯು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಅದಕ್ಕೆ ಯಾವುದೇ ಅದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಸೊಸೆಗೆ ಮಾಸಿಕವಾಗಿ ರೂ.24,000/- ಆದಾಯ ಇತ್ತು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಧಾರ ರಹಿತವಾಗಿ ಪರಿಹಾರ ಕೋರಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- ಶ್ರೀ ಎಲ್ ಕೆ ಎಂ ವಕೀಲರಿಂದ 1 ನೇ ಎದುರುದಾರರ ಪರಃ-

ಕೂಗಿಸಲಾಯಿತು ಬರಲಿಲ್ಲ, ಸಕಾರಣ ಕಂಡುಬರದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಆಳಂದ

ಎಮ್.ವಿ.ಸಿ.ನಂ.
ಪಿಡಬ್ಲೂ 1